ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೩೧ ಆಗಸ್ಟ್ ೨೦೨೪ ಸಂಚಿಕೆ ೧

"ಮರಗಳು, ನದಿಗಳು ಮತ್ತು ಪರ್ವತಗಳು ಹಾಗೂ (ಕೆ) ಅವನ ನಡುವಿನ ಅಂತರ ಬಹಳ ಕಡಿಮೆ ಎಂದೆನಿಸುತ್ತದೆ. ಅದನ್ನು ರೂಢಿಸಿದ್ದಲ್ಲ, ನೀವು ಅಂಥದ್ದೊಂದು ಅಂಶವನ್ನು ರೂಢಿಸಲು ಬರುವುದಿಲ್ಲ. ಅವನು ಹಾಗೂ ಅನ್ಯದ ನಡುವೆ ಯಾವತ್ತೂ ಗೋಡೆ ಇದ್ದಿರಲಿಲ್ಲ. ಅವು ಅವನಿಗೆ ಏನು ಹೇಳಿವೆ, ಅವನಿಗೆ ಏನು ಮಾಡಿವೆ ಎಂಬುದು ಯಾವತ್ತೂ ಅವನನ್ನು ಗಾಸಿಗೊಳಿಸಿಲ್ಲ ಅಥವಾ ಅದೆಲ್ಲ ಮುಖಸ್ತುತಿ ಎಂದೆನಿಸಿಲ್ಲ. ಹೇಗೋ ಅವು ಯಾವುವೂ ಅವನ ಮನವನ್ನು ತಟ್ಟಲಿಲ್ಲ. ಹಾಗಂತ ಅವನು ಒಳಸರಿದವನಲ್ಲ, ಉಳಿದವರಿಂದ ದೂರ ಉಳಿದವನಲ್ಲ, ಬದಲಾಗಿ ಅವನು ನದಿಯ ನೀರಿನಂತಿದ್ದ. ಅವನ ವಿಚಾರಗಳು ಕೆಲವೇ ಕೆಲವು; ಅವನು ಏಕಾಂಗಿಯಾಗಿರುವಾಗ ಯಾವ ಯೋಚನೆಯೂ ಇರುತ್ತಿರಲಿಲ್ಲ. ಮಾತನಾಡುವಾಗ ಅಥವಾ ಬರೆಯುವಾಗ ಅವನ ಮಿದುಳು ಕ್ರಿಯಾಶೀಲವಾಗಿರುತ್ತಿತ್ತು. ಉಳಿದ ಸಮಯಗಳಲ್ಲಿ ಅದು ಶಾಂತವಾಗಿರುತ್ತಿತ್ತು. ಯಾವುದೇ ಚಲನೆಯಿಲ್ಲದೆ ಕ್ರಿಯಾಶೀಲವಾಗಿರುತ್ತಿತ್ತು."

KRISHNAMURTI'S JOURNAL - SEP .17. 1972



ಜೆ ಕೃಷ್ಣಮೂರ್ತಿ

# ಮನಸ್ಸು ಎಂಬುದು ಜ್ಞಾತ

ಮನಸ್ಸು ಎಂಬುದು ಜ್ಞಾತ; ಜ್ಞಾತವೆಂದರೆ ಈಗಾಗಲೇ ಅನುಭವಿಸಿದ್ದು. ಈ ಮಾಪನದ ನೆರವಿನಿಂದ ನಾವು ಅಜ್ಞಾತವನ್ನು ತಿಳಿಯಲು ಯತ್ನಿಸುತ್ತೇವೆ. ಆದರೆ ಜ್ಞಾತವೆಂದೂ ಅಜ್ಞಾತವನ್ನು ಅರಿಯಲಾರದು; ಅದು ಇದುವರೆಗೆ ತಾನು ಅನುಭವಿಸಿದ್ದನ್ನು ಅರಿಯಬಹುದು. ತನಗೆ ಕಲಿಸಿದ್ದನ್ನು ತಿಳಿಯಬಹುದು; ತಾನು ಸಂಗ್ರಹಿಸಿದ್ದನ್ನು ಗ್ರಹಿಸಬಹುದು. ಅಜ್ಞಾತವನ್ನು ತಿಳಿಯಲೆತ್ನಿಸುವ ಮನಸ್ಸು ಅದನ್ನು ಅರಿಯಲಾರೆ ಎಂಬ ನಿಜವನ್ನು ಕಾಣಬಲ್ಲುದೆ? ಮನಸ್ಸಿಗೆ ಅಜ್ಞಾತವನ್ನು ಅರಿಯಲು ಸಾಧ್ಯವಿಲ್ಲ ಎಂದು ಖಚಿತವಾದ ಮೇಲೆ ಪೂರ್ಣ ಶಾಂತಿ ನೆಲೆಸುತ್ತದೆ. ಜ್ಞಾತದ ಬಲದಿಂದ ಅಜ್ಞಾತವನ್ನು ಸೆರೆಹಿಡಿಯಬಲ್ಲೆ ಎಂದು ಭಾವಿಸಿದರೆ ನಾನು ಬಹಳ ಗದ್ದಲ ಎಬ್ಬಿಸುತ್ತೇನೆ; ಮಾತನಾಡುತ್ತೇನೆ, ತಿರಸ್ಕರಿಸುತ್ತೇನೆ, ಆಯ್ದುಕೊಳ್ಳುತ್ತೇನೆ, ಅಜ್ಞಾತದೆಡೆಗೆ ಸಾಗುವ ಹಾದಿಯನ್ನು ಕಂಡುಕೊಳ್ಳಲು ಹವಣಿಸುತ್ತೇನೆ. ಆದರೆ ತನ್ನ ಅಸಾಮರ್ಥ್ಯದ ಅರಿವು ಮನಸ್ಸಿಗೆ ಆದಾಗ, ಅಜ್ಞಾತದತ್ತ ಮುಖಮಾಡಿ ಒಂದು ಹೆಜ್ಜೆ ಕೀಳುವುದಕ್ಕೆ ತನಗೆ ಅಸಾಧ್ಯವೆಂದು ತಿಳಿದಾಗ ಏನಾಗುತ್ತದೆ?

ಆಗ ಮನಸ್ಸು ಸಂಪೂರ್ಣ ಮೌನಿಯಾಗುತ್ತದೆ. ಅದು ನಿರಾಸೆಗೊಳ್ಳುವುದಿಲ್ಲ, ಏನನ್ನೂ ಅರಸುವುದಿಲ್ಲ. ಜ್ಞಾತದಿಂದ ಜ್ಞಾತದ ಕಡೆಗಷ್ಟೇ ಹುಡುಕಾಟ ನಡೆಯುತ್ತದೆ. ಈ ಚಲನೆಯಿಂದ ಅಜ್ಞಾತದ ಅನಾವರಣ ಅಸಾಧ್ಯವೆಂಬುದನ್ನು ಮನಸ್ಸು ಮನಗಾಣುತ್ತದೆ. ಜ್ಞಾತದ ಯಾವುದೇ ಚಲನೆಯು ಜ್ಞಾತದ ವಲಯದೊಳಗೇ ಆಗುವಂಥದ್ದು. ಇದನ್ನಷ್ಟೇ ನಾನು ಪರಿಭಾವಿಸಬಲ್ಲೆ; ಇಷ್ಟನ್ನು ಮಾತ್ರವೇ ಮನಸ್ಸು ಮನಗಾಣಬೇಕಾದದ್ದು. ಆಗ ಯಾವುದೇ ಪ್ರಚೋದನೆ ಹಾಗೂ ಉದ್ದೇಶವಿಲ್ಲದೆ ಮನಸ್ಸು ಮೌನವಾಗುತ್ತದೆ. ಚೆಲುವು ಮೌನ ಎಂಬುದನ್ನು ನೀವು ಗಮನಿಸಿಲ್ಲವೆ? ಇನ್ನೊಬ್ಬರ ಕೈಹಿಡಿದು ಕೊಂಡಾಗ ಅಥವಾ ಚೆಲುವಾದ ಪುಟ್ಟ ಮಗುವನ್ನು ನೋಡುವಾಗ ಅಥವಾ ಸಂಜೆಯ ಸೊಬಗನ್ನು ಆಸ್ವಾದಿಸುವಾಗ ಇದು ನಿಮ್ಮ ಗಮನಕ್ಕೆ ಬಂದಿರಬಹುದು. ಪ್ರೇಮಕ್ಕೆ ಭೂತವೂ ಇಲ್ಲ, ಭವಿಷ್ಯವೂ ಇಲ್ಲ. ಅದು ಈ ಅಸಾಧಾರಣ ಮೌನದ ಸ್ಥಿತಿಯಲ್ಲಿದೆ. ಈ ಮೌನ, ಅಂದರೆ ಸಂಪೂರ್ಣ ಶೂನ್ಯ ಇಲ್ಲದಿದ್ದರೆ ಸೃಷ್ಟಿಯೂ ಇರದು. ನೀವು ಜಾಣರಿರಬಹುದು. ಆದರೆ ಸೃಷ್ಟಿ ಇಲ್ಲದಿದ್ದರೆ ಅಲ್ಲಿ ವಿನಾಶ, ಅವಸಾನ ಕಂಡು ಬರುತ್ತದೆ, ಮನಸ್ಸು ಬಸವಳಿಯುತ್ತದೆ. ಮನಸ್ಸು ಶೂನ್ಯವಾದಾಗ, ಮೌನಿಯಾದಾಗ, ಪೂರ್ಣ ಸ್ಥಿತಿಯಲ್ಲಿರುತ್ತದೆ. ಹಾಗಂದರೆ ಖಾಲಿತನವಲ್ಲ ಅಥವಾ ಧನಾತ್ಮಕತೆಗೆ ವಿರುದ್ಧವಾದುದೂ ಅಲ್ಲದ ಸ್ಥಿತಿ; ಆಲೋಚನೆ ಪೂರ್ಣ ಇಲ್ಲವಾದ ಸ್ಥಿತಿ. ಸಂಪೂರ್ಣ ಭಿನ್ನವಾದ ಸ್ಥಿತಿ. ಈ ಸ್ಥಿತಿಯಲ್ಲಿ ಮಾತ್ರವೇ ನಾಮಾತೀತವಾದುದು ಸಾಕಾರಗೊಳ್ಳುತ್ತದೆ.

> "ಏನಿದೆಯೋ ಅದನ್ನು ಸರಿಯಾಗಿ ಗ್ರಹಿಸದಿರುವುದರಿಂದಲೇ ವಿಚಾರವನ್ನು ಸೃಷ್ಟಿಸುತ್ತೇವೆ. ಹೀಗಾಗಿ ವಾಸ್ತವಕ್ಕಿಂತ ವಿಚಾರಗಳೇ ಮುಖ್ಯವಾಗಿ ಬಿಡುತ್ತವೆ. ಅನವಧಾನದಲ್ಲಿ ನಾವು ಹೆಚ್ಚಿನವರು ವಿಚಾರಗಳನ್ನು ಸೃಷ್ಟಿಸುತ್ತೇವೆ. ಆ ವಿಚಾರಗಳು ನಮಗೆ ಭದ್ರತೆ ಹಾಗೂ ನಿಶ್ಚಿತತೆ ಒದಗಿಸುತ್ತವೆ ಎಂದಾದರೆ ನಾವು ಅವನ್ನು ಸೃಷ್ಟಿಸುತ್ತೇವೆ ಅಥವಾ ರೂಪಿಸಲು ಹೆಣಗುತ್ತೇವೆ. ಈ ನಿಶ್ಚಿತತೆಯ ಪ್ರಜ್ಞೆ, ಸುರಕ್ಷಿತತೆಯ ಪ್ರಜ್ಞೆ ವಿಚಾರಗಳನ್ನು ಉತ್ಪತ್ತಿ ಮಾಡುತ್ತದೆ. ನಾವು ಈ ವಿಚಾರಗಳತ್ತ ಓಡುತ್ತೇವೆ."

**ಕೃತಿ: ದೇವರು ಅಧ್ಯಾಯ ೧**

**ಮೂಲ: On God ಅನುವಾದ: ಡಾ.ಮಹಾಬಲೇಶ್ವರ ರಾವ್**



ಕಾಡುಗಳಲ್ಲಿ, ಮರದ ತೋಪುಗಳಲ್ಲಿ ಮೊಲಗಳನ್ನು, ಅಳಿಲುಗಳನ್ನು, ಬೇಟೆ ಹಕ್ಕಿಗಳನ್ನು ಮನುಷ್ಯ ಕೊಲ್ಲುತ್ತಾನೆ. ಇಲ್ಲಿನ ವಾತಾವರಣವೇ ಬೇರೆ. ಕೈಯಲ್ಲಿ ಬಂದೂಕು ಹಿಡಿದು ವಿಚಿತ್ರವಾದ ಹಿಂಸೆಯಿಂದ ಕೂಡಿದ ಮನುಷ್ಯನಿರುವ ಒಂದು ಪ್ರಪಂಚವನ್ನು ನೀವಿಲ್ಲಿ ಪ್ರವೇಶಿಸುತ್ತೀರಿ. ಇದರಿಂದಾಗಿ ಕಾಡುಗಳು ತಮ್ಮ ಮಾರ್ದವತೆಯನ್ನು, ತಮ್ಮ ಆಹ್ವಾನವನ್ನು ಕಳೆದುಕೊಳ್ಳುತ್ತವೆ, ಚೆಲುವೂ ನಾಶವಾಗುತ್ತದೆ; ಆ ಸಂತಸದ ಪಿಸುದನಿಯೂ ಇಲ್ಲವಾಗುತ್ತದೆ.



ಜೆ ಕೃಷ್ಣಮೂರ್ತಿ



ಒಂದು ದಿನ ಕಡಲ ಕಡೆಗೆ ಸಾಗುವ ದಾರಿಯಲ್ಲಿ ತಾಳೆ ಹಾಗೂ ಮಳೆ ಗಿಡಗಳ ನೆರಳಿನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಸಾವಿರಾರು ಸಂಗತಿಗಳತ್ತ ನೋಟ ಹರಿಸುತ್ತಿರುವಾಗ, ಕೆಲವು ಮಕ್ಕಳು ಹಾಡುತ್ತಿರುವುದು ಕಣ್ಣಿಗೆ ಬಿತ್ತು. ಅವರು ತುಂಬಾ ಖುಷಿಯಾಗಿರುವಂತೆ, ಮುಗ್ಧರಂತೆ, ಜಗತ್ತನ್ನು ಮರೆತವರಂತೆ ಕಂಡುಬರುತ್ತಿದ್ದರು. ಅವರಲ್ಲಿ ಒಬ್ಬಳು ನಮ್ಮನ್ನು ಗುರುತಿಸಿ ಮುಗುಳ್ನಗುತ್ತಾ ಬಳಿಗೆ ಬಂದಳು. ನಾವು ಸ್ವಲ್ಪ ಹೊತ್ತು ಕೈ ಕೈ ಹಿಡಿದುಕೊಂಡು ನಡೆದೆವು. ನಾವು ಯಾರೂ ಒಂದೇ ಒಂದು ಮಾತನ್ನೂ ಆಡಲಿಲ್ಲ. ಅವಳು ತನ್ನ ಮನೆ ಬಂದೊಡನೆ ನಮಸ್ಕಾರ ಹೇಳಿ ಮನೆಯೊಳಗೆ ಹೋಗಿಬಿಟ್ಟಳು. ಈ ಜಗತ್ತು ಮತ್ತು ಕುಟುಂಬ ಅವಳನ್ನು ನಾಶ ಮಾಡಲಿದೆ. ನಾಳೆ ಅವಳಿಗೆ ಮಕ್ಕಳಾಗುತ್ತವೆ, ಅವುಗಳಿಗಾಗಿ ಅವಳು ಕಣ್ಣೀರಿಡುತ್ತಾಳೆ. ಈ ಜಗತ್ತು ತನ್ನ ಕುಟಿಲ ನೀತಿಗಳಿಂದ ಆ ಮಕ್ಕಳನ್ನು ನಾಶ ಮಾಡುತ್ತದೆ. ಆದರೆ ಆ ಸಂಜೆ ಆಕೆ ಖುಷಿಯಾಗಿದ್ದಳು. ನನ್ನ ಕೈಹಿಡಿದುಕೊಂಡು ತನ್ನ ಸಂತೋಷವನ್ನು ವ್ಯಕ್ತಪಡಿಸಿದಳು.

KRISHNAMURTI'S JOURNAL, SEP 19, 1973

# ಸ್ಪರ್ಧಾತ್ಮಕತೆ

**ಪ್ರಶ್ನಾರ್ಥಿ** : *ನಾನು ಸ್ಪರ್ಧಾತ್ಮಕವಾಗಿರಲು ಬಯಸುವುದಿಲ್ಲ, ಆದರೆ ವಿಪರೀತ ಸ್ಪರ್ಧಾತ್ಮಕ ವಾತಾವರಣವಿರುವ ಈ ಸಮಾಜದಲ್ಲಿ ಸ್ಪರ್ಧಿಸದೆ ಇರುವುದು ಹೇಗೆ ಸಾಧ್ಯ?*

**ಕೃಷ್ಣಮೂರ್ತಿ** : ನೋಡಿ, ನಾವು ಈ ಸ್ಪರ್ಧಾತ್ಮಕ ಸಮಾಜದಲ್ಲಿ ಬದುಕಬೇಕಾಗಿದೆ, ಒಪ್ಪಿಕೊಂಡು ಬಿಟ್ಟಿದ್ದೇವೆ. ಹೀಗಾಗಿ ಇಲ್ಲಿ ಒಂದು ಸಿದ್ಧಾಂತ ರೂಪಿಸಲಾಗಿದೆ. ನಾವು ಅಲ್ಲಿಂದ ಪ್ರಾರಂಭ ಮಾಡುತ್ತೇವೆ. "ನಾನು ಈ ಸ್ಪರ್ಧಾತ್ಮಕ ಸಮಾಜದಲ್ಲಿ ಬದುಕಬೇಕು" ಎಂದು ಎಲ್ಲಿಯವರೆಗೆ ನೀವು ಹೇಳುತ್ತಿರುತ್ತೀರೋ ಅಲ್ಲಿಯವರೆಗೆ ನೀವು ಸ್ಪರ್ಧಾತ್ಮಕ ವಾಗಿರುತ್ತೀರಿ. ಈ ಸಮಾಜ ಸಂಚಯನಶೀಲವಾಗಿದೆ; ಅದು ಯಶಸ್ಸನ್ನು ಆರಾಧಿಸುತ್ತದೆ. ಯಶಸ್ವಿಯಾಗಬೇಕಾದರೆ ಸಹಜವಾಗಿಯೇ ನೀವೂ ಸ್ಪರ್ಧಾತ್ಮಕವಾಗಿರಬೇಕು.ಆದರೆ ಸಮಸ್ಯೆ ನಿಜಕ್ಕೂ ತುಂಬಾ ಗಾಢವಾದದ್ದು ಮತ್ತು ಸ್ಪರ್ಧೆಗಿಂತಲೂ ತುಂಬ ಮಹತ್ತ್ವಾಕಾಂಕ್ಷೆ. ಸ್ಪರ್ಧಿಸುವ ಬಯಕೆಯ ಹಿಂದೆ ಏನಿರುತ್ತದೆ? ಪ್ರತಿಯೊಂದು ಶಾಲೆಯಲ್ಲೂ ನಾವು ಸ್ಪರ್ಧಿಸಬೇಕು ಎಂದು ಹೇಳಿಕೊಡುತ್ತಾರಲ್ಲವೆ? ಅಂಕಗಳನ್ನು ಕೊಡುವ ಮೂಲಕ, ಮಂದ ಬುದ್ಧಿಯ ಹುಡುಗನನ್ನು ಬುದ್ಧಿವಂತನ ಜತೆ ಹೋಲಿಸುವ ಮೂಲಕ, ಬಡ ಹುಡುಗನೊಬ್ಬ ಮುಂದೊಂದು ದಿನ ಜನರಲ್ ಮೋಟಾರ್ ಕಂಪನಿಯ ಮುಖ್ಯಸ್ಥನು ಅಧ್ಯಕ್ಷನೂ ಆಗಬಹುದು ಎಂದು ಹುರಿದುಂಬಿಸುವ ಮೂಲಕ ಸ್ಪರ್ಧೆಯ ದೃಷ್ಟಾಂತ ನೀಡಲಾಗುತ್ತದೆ. ನಾವೇಕೆ ಪೈಪೋಟಿಗೆ ಅಷ್ಟೊಂದು ಮಹತ್ತ್ವ ಕೊಡಬೇಕು?

ಅದರ ಹಿಂದಿನ ಪ್ರಾಮುಖ್ಯವೇನು? ಒಂದು, ಸ್ಪರ್ಧೆ ಎಂದರೆ ಶಿಸ್ತು ಅಲ್ಲವೆ? ನೀವು ನಿಯಂತ್ರಿಸಬೇಕು, ವ್ಯವಸ್ಥೆಗೆ ಹೊಂದಿಕೊಳ್ಳಬೇಕು, ಉಳಿದವರ ಹಾದಿಯಲ್ಲಿ ನೀವೂ ನಡೆಯಬೇಕು, ಉಳಿದವರ ಹಾಗೆ ನೀವಿರಬೇಕು ಅಥವಾ ಅವರಿಗಿಂತ ಉತ್ತಮರಾಗ ಬೇಕು, ಹೀಗೆ ಯಶಸ್ಸು ಗಳಿಸಲು ನಿಮ್ಮನ್ನು ನೀವು ಶಿಸ್ತಿಗೆ ಒಳಪಡಿಸಿಕೊಳ್ಳುತ್ತೀರಿ. ದಯವಿಟ್ಟು ಅನುಸರಿಸಿ. ಎಲ್ಲಿ ಪೈಪೋಟಿಗೆ ಪ್ರೋತ್ಸಾಹವಿರುತ್ತದೋ ಅಲ್ಲಿ ಒಂದು ನಿರ್ದಿಷ್ಟ ಕ್ರಿಯೆಗೆ ಮನಸ್ಸನ್ನು ಬಗ್ಗಿಸುವ ಪ್ರಕ್ರಿಯೆಯೂ ನಡೆಯುತ್ತದೆ. ಇದು ಒಂದರ್ಥದಲ್ಲಿ ಹುಡುಗ ಅಥವಾ ಹುಡುಗಿಯನ್ನು ನಿಯಂತ್ರಿಸುವ ಕ್ರಮವಲ್ಲವೆ? ನೀವು ಏನೋ ಆಗಬೇಕೆಂದಿದ್ದರೆ, ನೀವು ನಿಯಂತ್ರಿಸಿಕೊಳ್ಳಬೇಕು, ಶಿಸ್ತಿಗೆ ಒಳಪಡಬೇಕು, ಸ್ಪರ್ಧಿಸಬೇಕು. ನಾವು ಈ ರೀತಿಯಾಗಿ ಬೆಳೆದು ಬಂದವರು, ನಾವು ಈ ಕ್ರಮವನ್ನು ನಮ್ಮ ಮಕ್ಕಳಿಗೂ ದಾಟಿಸುತ್ತೇವೆ.

ಆದರೂ ಕಂಡುಕೊಳ್ಳಲು, ಶೋಧಿಸಲು ಮಕ್ಕಳಿಗೆ ಸ್ವಾತಂತ್ರ್ಯ ಕೊಡಬೇಕು ಎಂದು ಮಾತನಾಡುತ್ತೇವೆ.ವ್ಯಕ್ತಿಯ ಸ್ವಂತ ಇರವನ್ನು ಸ್ಪರ್ಧೆ ಮರೆಮಾಚುತ್ತದೆ. ನಿಮ್ಮನ್ನು ನೀವು ಅರಿತುಕೊಳ್ಳಲು ನೀವು ಬೇರೊಬ್ಬರ ಜತೆ ಸ್ಪರ್ಧಿಸುವಿರಾ? ನಿಮ್ಮನ್ನು ನೀವು ಪರರ ಜತೆ ಹೋಲಿಸಿಕೊಳ್ಳುವಿರಾ? ಹೋಲಿಕೆಯ ಮೂಲಕ ನಿಮ್ಮನ್ನು ನೀವು ಅರ್ಥಮಾಡಿ ಕೊಳ್ಳುವಿರಾ? ಏನನ್ನೇ ಆಗಲಿ ತುಲನೆಯ ಮೂಲಕ, ತೀರ್ಪಿನ ಮೂಲಕ ನೀವು ಗ್ರಹಿಸುವಿರಾ? ಒಂದು ಕಲಾಕೃತಿಯನ್ನು ಗ್ರಹಿಸಲು ನೀವು ಅದನ್ನು ಇನ್ನೊಂದು ಕಲಾಕೃತಿಯ ಜತೆ ಹೋಲಿಸುವಿರಾ ಅಥವಾ ನಿಮ್ಮ ಮನಸ್ಸು ಯಾವುದೇ ಹೋಲಿಕೆ ಮಾಡದೆ ಚಿತ್ರದ ಅರಿವು ಹೊಂದಿದಾಗ ಅದನ್ನು ಗ್ರಹಿಸುವಿರಾ? ಸ್ಪರ್ಧೆಯು ಸೋಲಿನ ಭಯವನ್ನು ಮರೆಮಾಚುತ್ತದೆ ನೀವು ನಿಮ್ಮ ಮಗನಲ್ಲಿ ಸ್ಪರ್ಧೆಯ ತುರುಸನ್ನು ಉದ್ದೀಪಿಸುವಿರಿ; ಏಕೆಂದರೆ ನೀವು ಸೋತ

ಕಡೆ ನಿಮ್ಮ ಮಗ ಗೆಲ್ಲಬೇಕೆಂದು ಬಯಸುತ್ತೀರಿ; ನೀವು ನಿಮ್ಮ ಮಗ ಅಥವಾ ನಿಮ್ಮ ದೇಶದ ಮೂಲಕ ನಿಮ್ಮನ್ನು ನೀವು ತೃಪ್ತಿಪಡಿಸಿಕೊಳ್ಳಬಯಸುವಿರಿ.

ಪ್ರಗತಿ, ವಿಕಾಸ ಇತ್ಯಾದಿಗಳು ತೀರ್ಪು, ಹೋಲಿಕೆಯ ಮೂಲಕ ಲಭ್ಯ ಎಂದು ನೀವು ಭಾವಿಸುತ್ತೀರಿ; ಆದರೆ ನೀವು ಯಾವಾಗ ಹೋಲಿಕೆ ಮಾಡುತ್ತೀರಿ? ಯಾವಾಗ ಸ್ಪರ್ಧಿಸುತ್ತೀರಿ? ನಿಮ್ಮ ಬಗ್ಗೆ ನಿಮಗೇ ಖಚಿತತೆ ಇಲ್ಲದಿರುವಾಗ, ನಿಮ್ಮನ್ನೇ ನೀವು ಅರಿಯದಿದ್ದಾಗ, ನಿಮ್ಮೆದೆಯಲ್ಲಿ ಭಯ ಇರುವಾಗ ನೀವು ಸ್ಪರ್ಧೆ, ತುಲನೆಗಳಲ್ಲಿ ತೊಡಗುತ್ತೀರಿ. ನಿಮ್ಮನ್ನು ನೀವು ಅರಿಯುವುದೆಂದರೆ ಬದುಕಿನ ಅಖಂಡ ಪ್ರಕ್ರಿಯೆಯನ್ನು ಅರಿಯುವುದು ಎಂದರ್ಥ. ಸ್ವಜ್ಞಾನವೆಂಬುದು ವಿವೇಕೋದಯದ ಮೊದಲ ಹಂತ. ಸ್ವಜ್ಞಾನವಿಲ್ಲದಿದ್ದಲ್ಲಿ ತಿಳಿವಳಿಕೆಯೂ ಇರುವುದಿಲ್ಲ; ಇರುವುದು ಅಜ್ಞಾನ ಮಾತ್ರ. ಅಜ್ಞಾನದ ಸಾತತ್ಯವು ಬೆಳವಣಿಗೆಯಲ್ಲ.

---


ಕೃತಿ: "ನಿಮ್ಮ ಜೀವನ ನಿಮ್ಮ ಕೈಯಲ್ಲಿದೆಯೆ?
ಮೂಲ: What are you doing with your Life?
ಅನುವಾದ: ಮಹಾಬಲೇಶ್ವರ ರಾವ್



“

*ಗುರಿಯ ಕಡೆ ಗಮನವಹಿಸಿದ ಸ್ವ-ದ ಚಟುವಟಿಕೆಯಿರುವಲ್ಲಿ ಕಂಡುಬರುವುದು ವಿನಾಶ, ಪ್ರತ್ಯೇಕತೆ. ಅಲ್ಲಿ ಸಹಕಾರವಿರುವುದಿಲ್ಲ. ನಿಜಕ್ಕೂ ನೀವು ಆಸೆಪಟ್ಟರೆ, ತೋರಿಕೆಗಲ್ಲದೆ ನಿಜವಾಗಿಯೂ ಸಹಕಾರವನ್ನು ಕಂಡುಕೊಳ್ಳಲು ಬಯಸಿದರೆ ಆಗ ಏನು ಮಾಡಬೇಕು?*

**ಜೆ ಕೃಷ್ಣಮೂರ್ತಿ**



# ಬೆಂಗಳೂರು ಅಧ್ಯಯನ ಕೇಂದ್ರದ ಪ್ರಕಟಣೆ

## Retreat Schedule 2024 - 2025

| | | |
|---|---|---|
| Aug 8th | 11th | Living in the Grip of Fear - what does it do to you? |
| Sept 12th | 15th | Education and the 'Understanding of Life |
| Oct 3rd | 6th | Why do I resist 'CHANGE'? |
| Nov 7th | 10th | Understanding Emotions-Hurt, Frustration & Anger |
| Dec 5th | 8th | Silence, Stillness,Meditation |
| Jan 16th | 19th | Significance of ‘Living the Here and Now’ in daily life |
| Feb 6th | 9th | Awakening ‘INTELLIGENCE’ in the age of ‘AI’ ? |
| Mar 6th | 9th | Exploring Anxiety, Stress & inner Conflict |
| April 10th | 13th | Why do I get ANGRY? |



ಮನಸ್ಸು ಒಮ್ಮೆ ಈ ಪಾವಿತ್ರ್ಯವನ್ನು ಕಂಡುಕೊಂಡಾಗ ಪ್ರತಿಯೊಂದುಕ್ರಿಯೆಯೂ ಶುದ್ಧೀಕರಣದ ಕ್ರಿಯೆಯೇ. ತನ್ನ ಭ್ರಮಣದ ಮೂಲಕ ಮನಸ್ಸು ತನ್ನನ್ನು ತಾನು ಮುಗ್ಧಗೊಳಿಸಿಕೊಳ್ಳುತ್ತದೆ ಮತ್ತು ಅದರಿಂದಾಗಿ ಅದು ಸಂಚಯನಶೀಲವಾಗುವುದಿಲ್ಲ. ಈ ಪಾವಿತ್ರ್ಯವನ್ನು ಕಂಡುಕೊಂಡ ಮನಸ್ಸು ಸತತವಾದ ಕ್ರಾಂತ ಸ್ಥಿತಿಯಲ್ಲಿರುತ್ತದೆ. ಈ ಕ್ರಾಂತಿ ಸಾಮಾಜಿಕ ಆರ್ಥಿಕ ಕ್ರಾಂತಿಯಲ್ಲ, ಆಂತರಿಕ ಕ್ರಾಂತಿ, ಈ ಕ್ರಾಂತಿಯ ಮೂಲಕ ಅದು ತನ್ನನ್ನು ತಾನು ನಿರಂತರವಾಗಿ ಶುದ್ಧೀಕರಿಸಿಕೊಳ್ಳುತ್ತದೆ. ಅದರ ಕ್ರಿಯೆಯು ಯಾವುದೋ ಸೂತ್ರ ಅಥವಾ ವಿಚಾರವನ್ನು ಆಧರಿಸಿರುವುದಿಲ್ಲ. ಅಪಾರ ಜಲರಾಶಿಯ ನದಿಯು ತಾನು ಹರಿಯುತ್ತಾ ತನ್ನನ್ನು ನಿರ್ಮಲಗೊಳಿಸಿ ಕೊಳ್ಳುವಂತೆ ಧಾರ್ಮಿಕ ಪಾವಿತ್ರ್ಯವನ್ನು ಕಂಡುಕೊಂಡ ಮನಸ್ಸು ಕೂಡ ಸ್ವಯಂ ಶುದ್ಧೀಕರಣಕ್ಕೆ ಒಳಗಾಗುತ್ತಲೇ ಇರುತ್ತದೆ.

ಜೆ ಕೃಷ್ಣಮೂರ್ತಿ

### ನಾವು ಸಂಬಂಧದಲ್ಲಿದ್ದೇವಾ ಅಥವಾ ನಮ್ಮ ಬಿಂಬಗಳಲ್ಲಿದ್ದೇವಾ?

ಸಂಬಂಧ ಎಂಬ ಶಬ್ದದ ಅರ್ಥವೇನು? ನಾವು ಯಾವತ್ತೂ ಒಬ್ಬರಿಗೊಬ್ಬರು ಸಂಬಂಧಿಸಿದ್ದೇವಾ ಅಥವಾ ನಮ್ಮದು ಪರಸ್ಪರರ ಬಗ್ಗೆ ರೂಪಿಸಿಕೊಂಡ ಎರಡು ಬಿಂಬಗಳ ನಡುವಿನ ಸಂಬಂಧವೇ? ನಿಮ್ಮ ಬಗ್ಗೆ ನನ್ನಲ್ಲಿ ಒಂದು ಬಿಂಬವಿದೆ ಮತ್ತು ನಿಮ್ಮಲ್ಲಿ ನನ್ನ ಬಗ್ಗೆ ಒಂದು ಬಿಂಬವಿದೆ. ನೀನು ನನ್ನ ಹೆಂಡತಿ ಅಥವಾ ಗಂಡ ಎಂಬಂಥ ಬಿಂಬ ನನ್ನಲ್ಲಿದೆ. ಸಂಬಂಧ ಇರುವುದು ಎರಡು ಬಿಂಬಗಳಲ್ಲಿ ಮಾತ್ರ. ಬಿಂಬ ಇಲ್ಲದಿರುವಾಗ ಮಾತ್ರವೇ ಇನ್ನೊಬ್ಬನ ಜತೆ ಸಂಬಂಧದಿಂದಿರಲು ಸಾಧ್ಯ. ಸ್ಮೃತಿ, ಅಪಮಾನಗಳು ಮುಂತಾದ ಬಿಂಬವಿಲ್ಲದೆ ನೀವು ನನ್ನನ್ನು, ನಾನು ನಿಮ್ಮನ್ನು ನೋಡಲು ಸಾಧ್ಯವಾದರೆ, ಆಗ ಅಲ್ಲಿ ಸಂಬಂಧವಿರುತ್ತದೆ. ಆದರೆ ಅವಲೋಕನಕಾರನ ಸ್ವಭಾವವೇ ಬಿಂಬ ತಾನೇ? ಅವಲೋಕಿಸಲು ಸಾಧ್ಯವಾಗುವುದಾದರೆ ನನ್ನ ಬಿಂಬ ನಿಮ್ಮ ಬಿಂಬವನ್ನು ಅವಲೋಕಿಸುತ್ತದೆ. ಇದನ್ನು ಸಂಬಂಧವೆನ್ನುವುದು; ಆದರೆ ಅದು ಎರಡು ಬಿಂಬಗಳ ನಡುವಿನ ಸಂಬಂಧವಾದುದರಿಂದ ಅಸ್ತಿತ್ವದಲ್ಲೇ ಇಲ್ಲ. ಸಂಬಂಧದಲ್ಲಿರುವುದು ಎಂದರೆ ಸಂಪರ್ಕದಲ್ಲಿರುವುದು. ಸಂಪರ್ಕವೆಂಬುದು ಪ್ರತ್ಯಕ್ಷ, ನೇರ, ಅದು ಬಿಂಬಗಳ ನಡುವಿನ ಸಂಪರ್ಕವಲ್ಲ. ಹಾಗಾಗಲು ಅಪಾರವಾದ ಅವಧಾನ, ಇನ್ನೊಬ್ಬನನ್ನು ಬಿಂಬರಹಿತವಾಗಿ ನೋಡುವ ಅರಿವುಬೇಕು. ಬಿಂಬವೆಂದರೆ ಆ ವ್ಯಕ್ತಿಯ ಬಗೆಗಿನ ನನ್ನ ನೆನಪುಗಳು, ಆತ ನನಗೆ ಮಾಡಿದ ಅಪಮಾನಗಳು, ನನ್ನನ್ನು ಖುಷಿಪಡಿಸಿದ ಬಗೆ, ಕೊಟ್ಟ ಸುಖಗಳು ಎಂಬಿತ್ಯಾದಿ. ಇಬ್ಬರ ನಡುವೆ ಬಿಂಬಗಳಿಲ್ಲದಿರುವ ಸ್ಥಿತಿಯಲ್ಲಿ ಸಂಬಂಧವಿರುತ್ತದೆ.



# ಕನ್ನಡದಲ್ಲಿ ಲಭ್ಯವಿರುವ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ

೧. ಜೆ.ಕೆ. ಜೀವನ – ದರ್ಶನ ರೂ.೧೩೦/-
ಅನು. ಡಾ. ನಿ. ಮುರಾರಿ ಬಲ್ಲಾಳ

೨. ಧ್ಯಾನ ಚಿಂತನ ರೂ. ೫೦/-
ಅನು. ಡಾ. ನಿ. ಮುರಾರಿ ಬಲ್ಲಾಳ

೩. ಶಿಕ್ಷಣ ಮತ್ತು ಜೀವನ ರೂ. ೬೫/-
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್

೪. ಅನುದಿನ ಚಿಂತನ ರೂ.೪೦೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

೫. ಹಿಂಸೆಯನ್ನು ಮೀರಿ ರೂ.೧೫೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

೬. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ ರೂ.೨೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

೭. ಬಾಳಿಗೊಂದು ಭಾಷ್ಯ - ಸಂಪುಟ ೧ ರೂ.೩೨೦/-
ಅನು. ಡಾ. ಮಹಾಬಲೇಶ್ವರ ರಾವ್

೮. ಬಾಳಿಗೊಂದು ಭಾಷ್ಯ - ಸಂಪುಟ ೨ ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

೯. ಬಾಳಿಗೊಂದು ಭಾಷ್ಯ - ಸಂಪುಟ ೩ ರೂ.೧೮೫/-
ಅನು. ಡಾ. ಮಹಾಬಲೇಶ್ವರ ರಾವ್

೧೦. ಮೊದಲ ಹಾಗೂ ಕೊನೆಯ ಬಿಡುಗಡೆ ರೂ.೩೫೦/-
ಅನು. ರುಕ್ಮಿಣಿ ಕೃಷ್ಣಮೂರ್ತಿ

೧೧. ಭಯ ನಿಮಗೇನು ಮಾಡೀತು? ರೂ.೪೦/-
ಅನು. ಎಸ್. ದಿವಾಕರ್

೧೨. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು? ರೂ.೪೦/-
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್

೧೩. ಸ್ವಾತಂತ್ರ್ಯ ಎಂದರೇನು? ರೂ.೪೦/-
ಅನು. ಗಿರೀಶ್ ವಾಘ್

೧೪. ಶಿಕ್ಷಣ ರೂ.೯೦/-
ಅನು. ಎಸ್.ಡಿ. ಕಾಶೀಕರ

೧೫. ಬದುಕಿನ ಕಡೆಗೆ ರೂ.೧೪೦/-
ಅನು. ಎಸ್.ಡಿ. ಕಾಶೀಕರ ಮತ್ತು
ವನಮಾಲಾ ಆರ್. ರಾವ್

೧೬. ನೀವೇ ಲೋಕ, ನಿಮ್ಮೊಳಗೇ ಲೋಕ ರೂ. ೧೦೦/-
ಅನು. ಡಾ. ಮಹಾಬಲೇಶ್ವರ ರಾವ್

೧೭. ಒಲವು ಒಂಟಿತನ ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

೧೮. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

೧೯. ಒಳಜಗತ್ತು ರೂ.೧೮೦/-
ಅನು. ಡಾ. ಮಹಾಬಲೇಶ್ವರ ರಾವ್

೨೦. ಸಾಮಾಜಿಕ ಜವಾಬ್ದಾರಿ ರೂ.೧೧೦/-
ಅನು. ಡಾ. ಮಹಾಬಲೇಶ್ವರ ರಾವ್

೨೧. ಶಿಕ್ಷಕನಿಗೆ ಶಿಕ್ಷಣ ರೂ. ೫೦/-
ಅನು. ಡಾ. ಬಿ.ಬಿ. ರಾಜಪುರೋಹಿತ್

೨೨. ನಿಮ್ಮ ಜೀವನ ನಿಮ್ಮ ಕೈಯಲ್ಲಿದೆಯೆ? ರೂ. ೨೦೦/-
ಅನು. ಡಾ. ಮಹಾಬಲೇಶ್ವರ ರಾವ್

೨೩. ಲೋಕ ಶಿಕ್ಷಕ ರೂ.೨೫೦/-
ಅನು. ಡಾ. ಮಹಾಬಲೇಶ್ವರ ರಾವ್

೨೪. ಕೃಷ್ಣಮೂರ್ತಿ ಆತ್ಮಸಂಗಾತ ರೂ. ೧೩೦/-
ಅನು. ಡಾ. ಮಹಾಬಲೇಶ್ವರ ರಾವ್

೨೫. ಮುಗಿದ ಶಾಲೆ ತೆರೆದ ಜೀವನ ರೂ.೨೧೦/-
ಅನು. ಡಾ. ಮಹಾಬಲೇಶ್ವರ ರಾವ್

*ನಮ್ಮಲ್ಲಿ ಪುಸ್ತಕಗಳು ರಿಯಾಯಿತಿ ಬೆಲೆಗಳಲ್ಲಿ ಲಭ್ಯವಿರುತ್ತವೆ.*

- ಕನ್ನಡ ಪುಸ್ತಕಗಳು ೨೦% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- ಆಂಗ್ಲ ಪುಸ್ತಕಗಳು ೪೦% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- KFI ಪ್ರಕಟಿತ ಕನ್ನಡ ಪುಸ್ತಕಗಳು ೫೦% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.

**ಕನ್ನಡ ಭಾಷಾಂತರ ಸಮಿತಿ ಸದಸ್ಯರು:**
ಡಾ॥ ಎಚ್. ಎಸ್. ರಾಘವೇಂದ್ರರಾವ್
ಪ್ರೊ॥ ಓ. ಎಲ್. ನಾಗಭೂಷಣ ಸ್ವಾಮಿ
ಡಾ॥ ವನಮಾಲಾ ವಿಶ್ವನಾಥ್

**Published by:**
The Study Bengaluru Education Centre
Krishnamurti Foundation India
Thataguni post, Bengaluru-560082

**Contact Information:**
Mob: 8317419451
Email: kfistudy@gmail.com
Website: www.kfistudy.org